ಮಾನವಸಂಪನ್ಮೂಲವಿಭಾಗ/मानवसंसाधनअनुभाग/**HUMAN RESOURCES SECTION**
ಭಾರತೀಯವಿಜ್ಞಾನಸಂಸ್ಥೆ/भारतीयविज्ञानसंस्थान/**INDIAN INSTITUTE OF SCIENCE**
ಬೆಂಗಳೂರು/बेंगलूर/**BANGALORE – 560012**
ದೂರವಾಣಿ/दूरभाष/**TELEPHONE: 2293 2232**
ಇ-ಮೇಲ್/E-mail/ईमेल : **recruitment.nt@iisc.ac.in**

# ಜಾಹೀರಾತು ಸಂಖ್ಯೆ ಆರ್ (ಎಚ್ ಆರ್) /ನೇಮಕಾತಿ-5/2022 (ನೇರ ನೇಮಕಾತಿ)

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ನೇರ ನೇಮಕಾತಿ ಮೂಲಕ ಕೆಳಗಿನ ಹುದ್ದೆಗಳನ್ನು ಭರ್ತಿ ಮಾಡಲು ಭಾರತೀಯ ನಾಗರಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಹುದ್ದೆ | ಹುದ್ದೆಗಳ ಸಂಖ್ಯೆ | | | | | | ಅಗತ್ಯ ಅರ್ಹತೆ | ವರ್ಗ | ವಯೋಮಿತಿ | ವೇತನ ಹಂತ (7ನೇ ಸಿಪಿಸಿ ಅನುಸಾರ) |
|---|---|---|---|---|---|---|---|---|---|---|
| | ಸಾಮಾನ್ಯ | ಎಸ್ ಸಿ | ಎಸ್ ಟಿ | ಒಬಿಸಿ | ಆರ್ಥಿಕ ದುರ್ಬಲ ವರ್ಗ | ಒಟ್ಟು | | | | |
| ಆಡಳಿತ ಸಹಾಯಕರು | 31 | 12 | 05 | 20 | 08 | 76* | ಕನಿಷ್ಠ ಶೇ. 50ರಷ್ಟು ಅಂಕಗಳೊಂದಿಗೆ ಪದವಿ | ಸಿ | 26 ವರ್ಷಗಳು** | ಹಂತ-03 (ರೂ. 21700 - 69100) |

* 04 ಹುದ್ದೆಗಳು ದಿವ್ಯಾಂಗರು-ಪಿಡಬ್ಲ್ಯುಡಿಗೆ ಮೀಸಲು – ತಲಾ 02 ಹುದ್ದೆಗಳು ವಿಭಾಗ-1 (ದೃಷ್ಟಿ ದೋಷ ಮತ್ತು ಮಂದ ದೃಷ್ಟಿ) ಹಾಗೂ ವಿಭಾಗ 4 ವೈಕಲ್ಯ (ಆಟಿಸಂ, ಬೌದ್ಧಿಕ ವಿಕಲತೆ, ನಿರ್ದಿಷ್ಟ ಕಲಿಕಾ ವಿಕಲತೆ, ಮಾನಸಿಕ ಕಾಯಿಲೆಗಳು ಮತ್ತು ಬಹು ವಿಕಲತೆಗಳು).
** ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ ಅನುಸಾರ.

| ಸಾಮಾನ್ಯ ಸೂಚನೆಗಳು | |
|---|---|
| **1.** | **ಅರ್ಜಿದಾರರಿಗೆ ಸೂಚನೆಗಳು** |
| | (ಎ) ಅಭ್ಯರ್ಥಿಗಳು ಹುದ್ದೆಗೆ ಅರ್ಜಿ ಸಲ್ಲಿಸುವ ಮುನ್ನ ಜಾಹೀರಾತಿನಲ್ಲಿ ಸೂಚಿಸಲಾದ ಕನಿಷ್ಠ ಅಗತ್ಯ ವಿದ್ಯಾರ್ಹತೆ, ವಯಸ್ಸು, ವೃತ್ತಿ ಅರ್ಹತೆ, ಅನುಭವದ ಮಾನದಂಡಗಳು ಇತ್ಯಾದಿಗಳನ್ನು ಎಚ್ಚರಿಕೆಯಿಂದ ಓದಬೇಕು. ಆನ್‌ಲೈನ್ ಅರ್ಜಿಯಲ್ಲಿ ಅಭ್ಯರ್ಥಿಯು ಸಲ್ಲಿಸಿದ ದತ್ತಾಂಶ ಆಧಾರದ ಮೇಲೆ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಲಾಗುವುದರಿಂದ, ಅಭ್ಯರ್ಥಿಗಳು ತಾವು ಅರ್ಜಿ ಸಲ್ಲಿಸುತ್ತಿರುವ ಸ್ಥಾನಕ್ಕೆ ಅರ್ಹತೆ ಹೊಂದಿರಬೇಕು.<br>(ಬಿ) ಹುದ್ದೆಗೆ ಆಯ್ಕೆಯು ಕೇವಲ ವೃತ್ತಿ-ಆಧಾರಿತ ಆಪ್ಟಿಟ್ಯೂಡ್ ಪರೀಕ್ಷೆಯನ್ನು ಆಧರಿಸಿರುತ್ತದೆ (ಶೇ. 100%ರಷ್ಟು). ಒಂದು ವೇಳೆ, ಪರೀಕ್ಷೆಗಳನ್ನು ಬಹು ಅವಧಿಗಳಲ್ಲಿ ನಡೆಸಿದರೆ, ಪ್ರತಿ ಅಭ್ಯರ್ಥಿಯು ವಿವಿಧ ಅವಧಿಗಳಲ್ಲಿ ಪಡೆದ ಅಂಕಗಳನ್ನು ಪ್ರಮಾಣಿತ ಮಾನದಂಡಗಳ ಪ್ರಕಾರ ಸಾಮಾನ್ಯಗೊಳಿಸಲಾಗುವುದು.<br>(ಸಿ) ಅರ್ಜಿದಾರರು ಆನ್‌ಲೈನ್‌ನಲ್ಲಿ ಮಾಹಿತಿಯನ್ನು ಸಲ್ಲಿಸುವಾಗ ಅಗತ್ಯ ಎಚ್ಚರ ವಹಿಸಬೇಕು. ಆನ್‌ಲೈನ್‌ನಲ್ಲಿ ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಸಂದರ್ಭದಲ್ಲೂ ಬದಲಾಯಿಸಲಾಗುವುದಿಲ್ಲ/ ಮತ್ತೆ ಸಲ್ಲಿಸಲಾಗುವುದಿಲ್ಲ. ಇದಲ್ಲದೆ, ಅರ್ಜಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿದ ಯಾವುದೇ ದತ್ತಾಂಶದ ನಿರ್ದಿಷ್ಟ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ವಿನಂತಿಯನ್ನು ಪರಿಗಣಿಸಲಾಗುವುದಿಲ್ಲ. ಆದ್ದರಿಂದ, ನೀವು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡಲು ಪ್ರಾರಂಭಿಸುವ ಮೊದಲು ದಯವಿಟ್ಟು ಎಲ್ಲಾ ದತ್ತಾಂಶ/ ವಿವರಗಳೊಂದಿಗೆ ಸಿದ್ಧವಾಗಿರಬೇಕು.<br>(ಡಿ) ಮೇಲೆ ತಿಳಿಸಿದಂತೆ 7ನೇ ಸಿಪಿಸಿ ಪ್ರಕಾರ 'ಪೇ ಮ್ಯಾಟ್ರಿಕ್ಸ್'ನಲ್ಲಿನ ವೇತನದ ಜೊತೆಗೆ, ಐಐಎಸ್ ಸಿ ನಿಯಮಾನುಸಾರ ಹುದ್ದೆಗಳಿಗೆ ಅನುಗುಣವಾದ ವೇತನ ಶ್ರೇಣಿಯಲ್ಲಿ ಅನುಮತಿಸುವ ಸಾಮಾನ್ಯ ಭತ್ಯೆಗಳನ್ನು ವೇತನ ಒಳಗೊಂಡಿರುತ್ತದೆ.<br>(ಇ) ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳು (ಪಿಡಬ್ಲ್ಯೂಡಿ) ಸಮರ್ಪಕವಾಗಿ ಭರ್ತಿ ಮಾಡಿದ ಅರ್ಜಿ ನಮೂನೆಯೊಂದಿಗೆ ಭಾರತ ಸರ್ಕಾರದ ನಿಯಮಗಳ ಪ್ರಕಾರ ಉದ್ಯೋಗದ ಉದ್ದೇಶಕ್ಕಾಗಿ ಸಮರ್ಥ ವೈದ್ಯಕೀಯ ಅಧಿಕಾರಿಗಳು ಸೂಚಿಸಿದ ಮತ್ತು |

ನೀಡಲಾದ ನಮೂನೆಯಲ್ಲಿ ಅಂಗವೈಕಲ್ಯ/ ವೈದ್ಯಕೀಯ ಪ್ರಮಾಣಪತ್ರವನ್ನು ಸಲ್ಲಿಸಬೇಕಿರುತ್ತದೆ.

(ಎಫ್) ಉದ್ಯೋಗ-ಆಧಾರಿತ ಸಾಮರ್ಥ್ಯ ಪರೀಕ್ಷೆಗೆ ಸಂಸ್ಥೆಯು ತನ್ನ ವಿವೇಚನೆ ಅನುಸಾರ ನಿಗದಿಪಡಿಸಿದ ಮಾನದಂಡದ ಅನ್ವಯ ಕನಿಷ್ಠ ಅರ್ಹತಾ ಅಂಕಗಳು ಇರಲಿವೆ.

(ಜಿ) ನಿರೀಕ್ಷಿತ ವಿದ್ಯಾರ್ಹತೆ ಮತ್ತು ಅನುಭವವನ್ನು ಅಭ್ಯರ್ಥಿಗಳು ಪೂರೈಸುವುದು ಅತ್ಯಗತ್ಯ ಅವಶ್ಯಕತೆಯಾಗಿದೆ. ಮೇಲೆ ತಿಳಿಸಿರುವಂತೆ ಸಾಮಾನ್ಯ ಮಾನದಂಡಗಳನ್ನು ಅನುಸರಿಸಿ ನೇಮಕಾತಿ/ ಆಯ್ಕೆಯ ಹಂತ(ಗಳ) ಪ್ರಕ್ರಿಯೆಯಲ್ಲಿ ಉದ್ಯೋಗ-ಆಧಾರಿತ ಸಾಮರ್ಥ್ಯ ಪರೀಕ್ಷೆಗಾಗಿ ಅಭ್ಯರ್ಥಿಯನ್ನು ಆಹ್ವಾನಿಸಲಾಗುವುದು. ಮೇಲೆ ತಿಳಿಸಿರುವಂತೆ ಸಂಸ್ಥೆಯು ಪರೀಕ್ಷೆಗಾಗಿ ತನ್ನದೇ ಮಾನದಂಡವನ್ನು ರಚಿಸಲು ಮುಕ್ತವಾಗಿರುತ್ತದೆ; ಹಾಗೂ ಉದ್ಯೋಗ-ಆಧಾರಿತ ಆಪ್ಟಿಟ್ಯೂಡ್ ಪರೀಕ್ಷೆಗಾಗಿ ನಿಗದಿತ ಮಾನದಂಡಕ್ಕಿಂತ ಹೆಚ್ಚಿನ ಅರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ಕರೆಯಲಾಗುತ್ತದೆ. ಇದಲ್ಲದೆ, ತುರ್ತುಸ್ಥಿತಿ ಅನ್ವಯ ಯಾವುದೇ ಕಾರಣವನ್ನು ನೀಡದೆಯೇ, ಜಾಹೀರಾತು ಮಾಡಲಾದ ಯಾವುದೇ ಹುದ್ದೆಗಳನ್ನು ಭರ್ತಿ ಮಾಡದಿರುವ ಹಕ್ಕನ್ನು ಸಹ ಐಐಎಸ್ ಸಿ ಸಂಸ್ಥೆ ಕಾಯ್ದಿರಿಸಿಕೊಂಡಿದೆ.

(ಎಚ್) ಅಭ್ಯರ್ಥಿಯು ಒಮ್ಮೆ ಒಂದು ಮೀಸಲು ವರ್ಗವನ್ನು ಆಯ್ಕೆ ಮಾಡಿದ ನಂತರ, ಇತರ ಕಾಯ್ದಿರಿಸಿದ ವರ್ಗಗಳ ಬದಲಾವಣೆಗಾಗಿ ಯಾವುದೇ ವಿನಂತಿಯನ್ನು ಸ್ವೀಕರಿಸಲಾಗುವುದಿಲ್ಲ.

(ಐ) ಎಲ್ಲಾ ಅಭ್ಯರ್ಥಿಗಳನ್ನು, ಅವರ ಮೀಸಲು ವರ್ಗ ಹೊರತುಪಡಿಸಿ ಸಾಮಾನ್ಯ ವರ್ಗದ ಖಾಲಿ ಹುದ್ದೆಗಳಿಗಾಗಿಯೂ ಪರಿಗಣಿಸಬಹುದು, ಇದು ಸಾಮಾನ್ಯ ಅಭ್ಯರ್ಥಿಗಳಿಗೆ ಸೂಚಿಸಲಾದ ಅರ್ಹತಾ ಮಾನದಂಡಗಳ ಅನುಸಾರ ಅನ್ವಯವಾಗಲಿದೆ. ಆದರೆ, ನಿರ್ದಿಷ್ಟ ಸಮುದಾಯಗಳಿಗೆ (ಎಸ್ ಸಿ/ ಎಸ್ ಟಿ/ ಒಬಿಸಿ-ಎನ್ ಸಿ ಎಲ್/ ಇಡಬ್ಲ್ಯೂ ಎಸ್) ನಿಗದಿಪಡಿಸಲಾದ ಖಾಲಿ ಹುದ್ದೆಗಳಿಗೆ ಆ ವರ್ಗಕ್ಕೆ ಸೇರಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.

(ಜೆ) ಭಾರತ ಸರ್ಕಾರದ ನಿಯಮಗಳ ಪ್ರಕಾರ ಮೀಸಲಾತಿ ನೀತಿಯನ್ನು ಆನ್‌ಲೈನ್ ನೋಂದಣಿಯ ಅಂತಿಮ ದಿನಾಂಕದವರೆಗೆ ಪರಿಗಣಿಸಬಹುದು. ಆನ್‌ಲೈನ್ ನೋಂದಣಿಯ ಕೊನೆಯ ದಿನಾಂಕದವರೆಗೆ ಭಾರತ ಸರ್ಕಾರದ ನಿಯಮಾನುಸಾರ ವಯೋಮಿತಿ ಸಡಿಲಿಕೆಯಲ್ಲಿ ಯಾವುದೇ ಪರಿಷ್ಕರಣೆ ಮಾಡಬಹುದು.

(ಕೆ) ಅರ್ಜಿಯ ಸ್ವೀಕೃತಿಯ ಅಂತಿಮ ದಿನಾಂಕಕ್ಕೆ ಅನ್ವಯಿಸುವಂತೆ ವಯೋಮಿತಿ ಮೀರಬಾರದು.

(ಎಲ್) ವಯೋಮಿತಿ ಸಡಿಲಿಕೆ, ಅವುಗಳ ಅನ್ವಯ ಮತ್ತು ಸ್ವೀಕಾರಾರ್ಹತೆಗಳು ಭಾರತ ಸರ್ಕಾರದ ಮಾನದಂಡಗಳ ಪ್ರಕಾರ ಇರಲಿವೆ.

(ಎಂ) ಸಂಸ್ಥೆಯಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವ, ಪ್ರಸ್ತುತ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ/ ಯೋಜನೆಗಳ ಸಿಬ್ಬಂದಿಗೆ ಅವರ ಸೇವೆಯ ಮಟ್ಟಿಗೆ ಒಂದು ಬಾರಿ ವಯೋಮಿತಿ ಸಡಿಲಿಕೆಯನ್ನು ಒದಗಿಸಲಾಗುವುದು.

(ಎನ್) 01.04.2022 ರಂದು ಅಥವಾ ನಂತರ ನೀಡಲಾದ ಇತರೆ ಹಿಂದುಳಿದ ವರ್ಗ-ಒಬಿಸಿ (ನಾನ್-ಕ್ರೀಮಿ ಲೇಯರ್) ಪ್ರಮಾಣಪತ್ರವನ್ನು ಒಬಿಸಿ (ನಾನ್-ಕ್ರೀಮಿ ಲೇಯರ್) ವರ್ಗದ ಅಡಿಯಲ್ಲಿ ಮೀಸಲಾತಿಗಾಗಿ ಮಾತ್ರ ಪರಿಗಣಿಸಲಾಗುವುದು. ಅಭ್ಯರ್ಥಿಯ ಜಾತಿಯು ಒಬಿಸಿಗಳ ರಾಜ್ಯವಾರು ಕೇಂದ್ರೀಯ ಪಟ್ಟಿಯಲ್ಲಿರಬೇಕು ಹಾಗೂ ಅಭ್ಯರ್ಥಿಯು ನಾನ್-ಕ್ರೀಮಿ ಲೇಯರ್ ವರ್ಗಕ್ಕೆ ಸೇರಿದವರು ಎಂಬುದನ್ನು ಪ್ರಮಾಣಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು.

(ಒ) 01.04.2022 ರಂದು ಅಥವಾ ನಂತರ ನೀಡಲಾದ ಆರ್ಥಿಕವಾಗಿ ದುರ್ಬಲ ವರ್ಗ –ಇಡಬ್ಲ್ಯೂ ಎಸ್ ಪ್ರಮಾಣಪತ್ರವನ್ನು ಮೀಸಲಾತಿಗಾಗಿ ಮಾತ್ರ ಇಡಬ್ಲ್ಯೂ ಎಸ್ ವರ್ಗದ ಅಡಿಯಲ್ಲಿ ಪರಿಗಣಿಸಲಾಗುತ್ತದೆ. ಸಕ್ಷಮ ಪ್ರಾಧಿಕಾರವು ಸೂಚಿಸಿದ ಮತ್ತು ನೀಡಲಾದ ನಮೂನೆಯಲ್ಲಿ ಆರ್ಥಿಕ ದುರ್ಬಲ ವರ್ಗದ ಪ್ರಮಾಣಪತ್ರಗಳನ್ನು ಮಾತ್ರ ಸದರಿ ಅಭ್ಯರ್ಥಿಯ ಇಡಬ್ಲ್ಯೂ ಎಸ್ ಅರ್ಹತೆಗೆ ಸೂಕ್ತ ಪುರಾವೆಯಾಗಿ ಸ್ವೀಕರಿಸಲಾಗುತ್ತದೆ. ಬೇರೆ ಯಾವುದೇ ಪ್ರಮಾಣಪತ್ರವನ್ನು ಸೂಕ್ತ ಪುರಾವೆಯಾಗಿ ಸ್ವೀಕರಿಸಲಾಗುವುದಿಲ್ಲ.

(ಪಿ) ಅಂಗವಿಕಲರಿಗೆ ವಯೋಮಿತಿ ಸಡಿಲಿಕೆಗಳು ಮತ್ತು ರಿಯಾಯಿತಿಗಳು ಪ್ರಸ್ತುತ ಕೇಂದ್ರ ಸರ್ಕಾರದ ಆದೇಶಗಳ ಅನುಸಾರ ಇರಲಿವೆ.

(ಕ್ಯೂ) ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳು (ಪಿಡಬ್ಲ್ಯೂ ಡಿ) ಸರಿಯಾಗಿ ಪೂರ್ಣಗೊಳಿಸಿದ ಅರ್ಜಿ ನಮೂನೆಯೊಂದಿಗೆ ಭಾರತ ಸರ್ಕಾರದ ನಿಯಮಗಳ ಪ್ರಕಾರ ಉದ್ಯೋಗದ ಉದ್ದೇಶಕ್ಕಾಗಿ ಸಕ್ಷಮ ವೈದ್ಯಕೀಯ ಅಧಿಕಾರಿಗಳು ಸೂಚಿಸಿದ ಮತ್ತು ನೀಡಿದ ನಮೂನೆಯಲ್ಲಿ ಅಂಗವೈಕಲ್ಯ/ ವೈದ್ಯಕೀಯ ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ. ಶೇ. 40ಕ್ಕಿಂತ ಹೆಚ್ಚಿನ ಅಂಗವೈಕಲ್ಯದಿಂದ ಬಳಲುತ್ತಿರುವ ವ್ಯಕ್ತಿಗಳು ಮಾತ್ರ ಈ ವರ್ಗದ ಅಡಿಯಲ್ಲಿನ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಅಂಗವೈಕಲ್ಯವು ಶೇ. 40ಕ್ಕಿಂತ ಕಡಿಮೆಯಿದ್ದರೆ ಪ್ರಮಾಣಪತ್ರವನ್ನು ತಿರಸ್ಕರಿಸಲಾಗುತ್ತದೆ.

(ಆರ್) ಎಲ್ಲಾ ಹುದ್ದೆಗಳಿಗೆ ನಿವೃತ್ತಿಯ ವಯಸ್ಸು 60 ವರ್ಷಗಳು.

(ಎಸ್) ಯಾವುದೇ ಹಂತದಲ್ಲಿ ಸ್ಕ್ರೀನಿಂಗ್, ನೇಮಕಾತಿ ಮತ್ತು ಆಯ್ಕೆ ಪ್ರಕ್ರಿಯೆಯ ಸಮಯದಲ್ಲಿ ಮತ್ತು ನೇಮಕಾತಿಯ ನಂತರವೂ ಅಭ್ಯರ್ಥಿಗಳು ಸುಳ್ಳು ಅಥವಾ ತಪ್ಪು ಮಾಹಿತಿಯನ್ನು ಒದಗಿಸಿರುವುದು ಕಂಡುಬಂದರೆ, ಅವರ ಉಮೇದುವಾರಿಕೆಯನ್ನು ತಕ್ಷಣವೇ ತಿರಸ್ಕರಿಸಲಾಗುತ್ತದೆ/ ರದ್ದುಗೊಳಿಸಲಾಗುತ್ತದೆ/ ಅಂತ್ಯಗೊಳಿಸಲಾಗುತ್ತದೆ. ಅಪೂರ್ಣ/ ಅಭ್ಯರ್ಥಿಯ ತಪ್ಪು ಮಾಹಿತಿಗಾಗಿ ಸಂಸ್ಥೆಯು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ. ಈ ವಿಷಯದಲ್ಲಿ ಯಾವುದೇ ಪತ್ರ ವ್ಯವಹಾರವನ್ನು ನಂತರದ ದಿನಾಂಕದಲ್ಲಿ ಪರಿಗಣಿಸಲಾಗುವುದಿಲ್ಲ.

**2. ಅರ್ಜಿ ಸಲ್ಲಿಕೆ**

(ಎ) ಅಭ್ಯರ್ಥಿಗಳು 17.12.2022 ರಿಂದ 06.01.2023 ರ ರಾತ್ರಿ 11:59ರೊಳಗೆ ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕಾಗುತ್ತದೆ.

(ಬಿ) ಆನ್‌ಲೈನ್ ಮೋಡ್ ಮೂಲಕ ಅರ್ಜಿಯನ್ನು ಸಲ್ಲಿಸಲು, ದಯವಿಟ್ಟು ಗೆ ಭೇಟಿ ನೀಡಿ:

https://cdn.digialm.com:443//EForms/configuredHtml/956/80596/Registration.html
https://cdn.digialm.com:443//EForms/configuredHtml/956/80596/login.html

(ಸಿ) ಬೋಧಕೇತರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯ ಯಾವುದೇ ಹಾರ್ಡ್‌ಕಾಪಿ ಸಲ್ಲಿಕೆಯನ್ನು ಸ್ವೀಕರಿಸಲಾಗುವುದಿಲ್ಲ. ಆದಾಗ್ಯೂ, ಭವಿಷ್ಯದ ಉಲ್ಲೇಖಕ್ಕಾಗಿ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ನಮೂನೆಯ ಮುದ್ರಣವನ್ನು ಇರಿಸಿಕೊಳ್ಳಲು ಸಲಹೆ ನೀಡಲಾಗುತ್ತದೆ.

(ಡಿ) ಸರ್ಕಾರಿ / ಪಿಎಸ್‌ಯು / ಸ್ವಾಯತ್ತ ಸಂಸ್ಥೆಗಳಲ್ಲಿ ಕೆಲಸ ಮಾಡುವ ಅಭ್ಯರ್ಥಿಗಳು ಪ್ರಸ್ತುತ ಉದ್ಯೋಗದಾತರಿಂದ ನಿರಾಕ್ಷೇಪಣಾ ಪತ್ರ- ಎನ್ ಒ ಸಿ ಪಡೆದುಕೊಳ್ಳಬೇಕು ಮತ್ತು ಅದನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಆದಾಗ್ಯೂ, ದಾಖಲೆ ಪರಿಶೀಲನೆಯ ಸಮಯದಲ್ಲಿ ಎನ್‌ಒಸಿಯನ್ನು ಸಲ್ಲಿಸಲಾಗುವುದು ಎಂದು ಸಮರ್ಪಕವಾಗಿ ಸಹಿ ಮಾಡಿದ ಒಪ್ಪಂದವನ್ನು ಅಭ್ಯರ್ಥಿಯು ಅಪ್‌ಲೋಡ್ ಮಾಡಿದರೆ ಎನ್‌ಒಸಿ ಇಲ್ಲದ ಅರ್ಜಿಯನ್ನು ಸಹ ಪರಿಗಣಿಸಲಾಗುತ್ತದೆ.

(ಇ) ಅಪೂರ್ಣ ಅರ್ಜಿಗಳನ್ನು ಸಾರಾಸಗಟಾಗಿ ತಿರಸ್ಕರಿಸಲಾಗುವುದು.

(ಜಿ) ಅಭ್ಯರ್ಥಿಯ ಅರ್ಹತೆ ಮತ್ತು ಸಾಮರ್ಥ್ಯ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಸಂಸ್ಥೆಯ ನಿರ್ಧಾರವು ಅಂತಿಮವಾಗಿರುತ್ತದೆ ಮತ್ತು ಎಲ್ಲಾ ಅಭ್ಯರ್ಥಿಗಳಿಗೆ ಅನ್ವಯವಾಗಿರುತ್ತದೆ.

(ಎಚ್) ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯು ಅವರು ವೈದ್ಯಕೀಯವಾಗಿ ಸದೃಢರೆಂದು ಪ್ರಮಾಣೀಕರಣ ಹಾಗೂ ಸಂಸ್ಥೆಯ ಅಗತ್ಯತೆಗಳಿಗೆ ಒಳಪಟ್ಟಿರುತ್ತದೆ.

(ಐ) ಅರ್ಹತೆಗೆ ಪೂರಕವಾಗಿ ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರಗಳನ್ನು ಅಪ್‌ಲೋಡ್ ಮಾಡುವುದು ಮತ್ತು ಸಲ್ಲಿಸುವುದು (10 ನೇ ತರಗತಿಯಿಂದ ಮೊದಲುಗೊಂಡು); ಅಗತ್ಯ ಅರ್ಹತಾ ಪದವಿಯಲ್ಲಿ ಅಭ್ಯರ್ಥಿ ಪಡೆದ ಅಂಕಗಳು, ಅನುಭವ ಇತ್ಯಾದಿಗಳನ್ನು ಅರ್ಜಿ ನಮೂನೆಯೊಂದಿಗೆ ಸಲ್ಲಿಸುವುದು ಕಡ್ಡಾಯವಾಗಿದೆ. ಈ ಲಗತ್ತುಗಳಿಲ್ಲದ ಅರ್ಜಿಗಳನ್ನು ಸಾರಾಸಗಟಾಗಿ ತಿರಸ್ಕರಿಸಲಾಗುತ್ತದೆ. ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಪತ್ರವ್ಯವಹಾರಕ್ಕೆ ಅವಕಾಶವಿಲ್ಲ.

(ಜೆ) ಪದವಿಗೆ ಸಂಬಂಧಿಸಿದಂತೆ ಸಿಜಿಪಿಎ/ಜಿಪಿಎ ವ್ಯವಸ್ಥೆಯಡಿಯಲ್ಲಿ ಪದವಿಗಳನ್ನು ಪಡೆದ ಅಭ್ಯರ್ಥಿಗಳು ವಿಶ್ವವಿದ್ಯಾಲಯ/ ಸಂಸ್ಥೆಯ ಮಾರ್ಗಸೂಚಿಗಳ ಪ್ರಕಾರ ಸಿಜಿಪಿಎ/ಜಿಪಿಎ ಅನ್ನು ಸೂಕ್ತ ಶೇಕಡಾವಾರುಗೆ ಪರಿವರ್ತಿಸಲು, ಹಾಗೂ ಪಡೆದ ಅಂಕಗಳ ಸರಿಯಾದ ಶೇಕಡಾವಾರು ಪ್ರಮಾಣವನ್ನು ಸಲ್ಲಿಸಲು ಸೂಚಿಸಲಾಗಿದೆ. ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಪರಿವರ್ತನೆ ಸೂತ್ರಕ್ಕೆ ಸಾಕ್ಷ್ಯವನ್ನು ಒದಗಿಸುವ ಜವಾಬ್ದಾರಿ ಅಭ್ಯರ್ಥಿಯದಾಗಿರುತ್ತದೆ.

(ಕೆ) ಅಭ್ಯರ್ಥಿಯು ಸಲ್ಲಿಸಿದ ಪೂರ್ವವಿವರಗಳನ್ನು ಅಥವಾ ದಾಖಲೆಗಳನ್ನು ನೇಮಕಾತಿ ಅವಧಿ ಅಥವಾ ಸೇವಾ ಅವಧಿ ಸೇರಿದಂತೆ ಯಾವುದೇ ವೇಳೆ ಸಂಸ್ಥೆಯು ಪರಿಶೀಲಿಸಲಿದೆ. ಅಭ್ಯರ್ಥಿಗಳು ಸಲ್ಲಿಸಿದ ದಾಖಲೆಗಳು ನಕಲಿ ಎಂದು ಪತ್ತೆಯಾದಲ್ಲಿ ಅಥವಾ ಅಭ್ಯರ್ಥಿಯು ಅನುಮಾನಾಸ್ಪದ/ ಸ್ವೀಕಾರಾರ್ಹವಲ್ಲದ ಪೂರ್ವಾಪರಗಳು/ ಹಿನ್ನೆಲೆಗಳನ್ನು ಹೊಂದಿದ್ದರೆ ಮತ್ತು ಈ ಮಾಹಿತಿಯನ್ನು ನಿಗ್ರಹಿಸಿದ್ದರೆ, ನಂತರ ಅವನ / ಅವಳ ಸೇವೆಗಳನ್ನು ತಕ್ಷಣವೇ ಕೊನೆಗೊಳಿಸಲಾಗುತ್ತದೆ ಮತ್ತು ಹೆಚ್ಚುವರಿಯಾಗಿ, ಕಾನೂನಿನ ಪ್ರಕಾರ ಅಂತಹ ಅಭ್ಯರ್ಥಿಗಳು/ ಉದ್ಯೋಗಿಗಳ ವಿರುದ್ಧ ಕಾನೂನು ಕ್ರಮವನ್ನು ಪ್ರಾರಂಭಿಸಬಹುದು.

(ಎಲ್) ಫಲಿತಾಂಶಗಳನ್ನು ಪ್ರಕಟಿಸುವ ಮೊದಲು ಅರ್ಜಿದಾರರು ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿದ ವಿವರಗಳನ್ನು ಸರಿಯಾಗಿ ಪರಿಶೀಲಿಸಲಾಗುತ್ತದೆ. ಅಭ್ಯರ್ಥಿಗಳು ಭರ್ತಿ ಮಾಡಿದ ವಿವರಗಳಿಗೆ ಅಧಿಕೃತ ಪುರಾವೆಗಳನ್ನು ಒದಗಿಸಲು ವಿಫಲವಾದರೆ, ಅವರ ಉಮೇದುವಾರಿಕೆಯನ್ನು ಸಂಕ್ಷಿಪ್ತವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

(ಎಮ್) ಈ ಜಾಹೀರಾತಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಅನುಬಂಧ ಇದ್ದಲ್ಲಿ, ಅವುಗಳನ್ನು ಸಂಸ್ಥೆಯ ಜಾಲತಾಣದಲ್ಲಿ ಮಾತ್ರ ಪ್ರಕಟಿಸಲಾಗುವುದು.

| | |
|---|---|
| | (ಎನ್) 01.01.2004 ರಂದು ಅಥವಾ ನಂತರ ಸಂಸ್ಥೆಯ ಸೇವೆಗೆ ನೇಮಕಗೊಂಡ ಎಲ್ಲಾ ಉದ್ಯೋಗಿಗಳು ಹೊಸ ಪಿಂಚಣಿ ಯೋಜನೆ (ಎನ್ ಪಿ ಎಸ್) ಅಡಿಯಲ್ಲಿ ಒಳಗೊಳ್ಳುತ್ತಾರೆ.<br>(ಒ) ಸೇವೆಯ ಅವಧಿಯಲ್ಲಿ, ಪ್ರತಿಯೊಬ್ಬ ಉದ್ಯೋಗಿಯು ಯೋಜನೆ, ನಿಯಮಗಳು ಮತ್ತು ಬೈಲಾಗಳು (ಎಸ್ ಆರ್ ಬಿ), ಆಡಳಿತಾತ್ಮಕ ಕೈಪಿಡಿಗಳು, ಇತರ ಶಾಸನಬದ್ಧ ದಾಖಲೆಗಳು, ಸಿಸಿಎಸ್ (ನಡವಳಿಕೆ) ನಿಯಮಗಳು ಮತ್ತು ಸಿಸಿಎಸ್ (ಸಿಸಿಎ) ಇತ್ಯಾದಿ ನಿಯಮಗಳನ್ನು ಗಮನಿಸಬೇಕು, ಅವುಗಳಿಗೆ ವಿಧೇಯರಾಗಿರಬೇಕು ಮತ್ತು ಪಾಲಿಸಬೇಕು.<br>(ಪಿ) ನಿಗದಿತ ವಿದ್ಯಾರ್ಹತೆ ಕನಿಷ್ಠ ಅರ್ಹತೆಯಾಗಿದ್ದು, ಅಭ್ಯರ್ಥಿಯು ಅದನ್ನು ಹೊಂದಿದ್ದಾರೆ ಎಂಬ ಮಾತ್ರಕ್ಕೆ ಲಿಖಿತ ಪರೀಕ್ಷೆಗೆ ಅವರನ್ನು ಕರೆಯಲು ಅರ್ಹತೆ ಇದೆ ಎಂದೇನಲ್ಲ.<br>(ಕ್ಯೂ) ಅಭ್ಯರ್ಥಿಗಳು ಕೊನೆಯ ದಿನಾಂಕದವರೆಗೆ ಕಾಯದೆ ಮುಂಚಿತವಾಗಿಯೇ ಅರ್ಜಿಗಳನ್ನು ಸಲ್ಲಿಸಬೇಕು.<br>(ಆರ್) ಲಿಖಿತ ಪರೀಕ್ಷೆಗೆ ಹಾಜರಾಗಲು ಕರೆ ಪತ್ರಗಳನ್ನು ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಕಳುಹಿಸಲಾಗುವುದು ಮತ್ತು ಇ-ಮೇಲ್ ಮೂಲಕ ತಿಳಿಸಲಾಗುವುದು. ಅಭ್ಯರ್ಥಿಗಳು ತಮ್ಮ ನೋಂದಾಯಿತ ಮೇಲ್ ಅನ್ನು ಆಗಾಗ್ಗೆ ಪರಿಶೀಲಿಸಬೇಕಾಗುತ್ತದೆ. ಉದ್ಯೋಗ-ಆಧಾರಿತ ಸಾಮರ್ಥ್ಯ ಪರೀಕ್ಷೆಗೆ ಅರ್ಹತೆ ಹೊಂದಿರದ ಅರ್ಜಿದಾರರೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸಲಾಗುವುದಿಲ್ಲ.<br>(ಎಸ್) ಸಂಸ್ಥೆಯು ಯಾವುದೇ ಕಾರಣವನ್ನು ನೀಡದೆ, ಯಾವುದೇ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಯಾವುದೇ ಆಡಳಿತಾತ್ಮಕ ಕಾರಣದಿಂದ ಯಾವುದೇ ಹಂತದಲ್ಲಿ ಜಾಹೀರಾತು/ ನೇಮಕಾತಿಯನ್ನು ರದ್ದುಗೊಳಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಈ ನಿಟ್ಟಿನಲ್ಲಿ ಯಾವುದೇ ಪತ್ರ ವ್ಯವಹಾರವನ್ನು ನಡೆಸಲಾಗುವುದಿಲ್ಲ.<br>(ಟಿ) ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ.<br>(ಯು) ಅಭ್ಯರ್ಥಿಗೆ ಅವನ/ ಅವಳ ಆಯ್ಕೆಯ ಪರೀಕ್ಷಾ ಕೇಂದ್ರವನ್ನು ಒದಗಿಸಲು ಸಂಸ್ಥೆಯು ಎಲ್ಲಾ ಪ್ರಯತ್ನಗಳನ್ನು ಮಾಡುತ್ತದೆ. ಇದಕ್ಕಾಗಿ ಅರ್ಜಿದಾರರು ಆನ್‌ಲೈನ್ ಅರ್ಜಿಯಲ್ಲಿ ನೀಡಲಾದ ಗೊತ್ತುಪಡಿಸಿದ ಕೇಂದ್ರಗಳ ಪಟ್ಟಿಯಿಂದ ಮೂರು ಆಯ್ಕೆ ಮಾಡಬೇಕಾಗುತ್ತದೆ. ಆದಾಗ್ಯೂ, ತತ್ಕಾಲದಲ್ಲಿ ಉದ್ಭವಿಸುವ ವಿಶೇಷ ಸಂದರ್ಭಗಳ ಅನುಸಾರ ಸಂಸ್ಥೆಯು ತನ್ನ ವಿವೇಚನೆಗೆ ಅನುಗುಣವಾಗಿ ಅಭ್ಯರ್ಥಿಗಳಿಗೆ ಯಾವುದೇ ಇತರ ಕೇಂದ್ರಗಳನ್ನು ಒದಗಿಸುವ ಹಕ್ಕನ್ನು ಕಾಯ್ದಿರಿಸಿದೆ ಎಂಬುದನ್ನು ಗಮನಿಸಬಹುದು. ಸಂಸ್ಥೆಯು ಯಾವುದೇ ಸಮಯದಲ್ಲಿ ಗೊತ್ತುಪಡಿಸಿದ ಕೇಂದ್ರಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದು ಅಥವಾ ಹೆಚ್ಚಿಸಬಹುದು. ಕೇಂದ್ರ/ಸ್ಥಳದ ಬದಲಾವಣೆಗೆ ಸಂಬಂಧಿಸಿದ ಯಾವುದೇ ವಿನಂತಿಯನ್ನು ಸ್ವೀಕರಿಸಲಾಗುವುದಿಲ್ಲ ಎಂಬುದನ್ನು ಅಭ್ಯರ್ಥಿಗಳು ಗಮನಿಸಬೇಕು. |
| **3.** | **ಶುಲ್ಕ ಪಾವತಿ** |
| | (ಎ) ಎಸ್ ಸಿ/ಎಸ್ ಟಿ, ಪಿಡಬ್ಲ್ಯೂಡಿ, ಮಾಜಿ ಸೈನಿಕರು, ಲಿಂಗಪರಿವರ್ತಿತರು ಮತ್ತು ಮಹಿಳಾ ಅಭ್ಯರ್ಥಿಗಳು ರೂ. 50/- ಸೇವಾ ಶುಲ್ಕ ಸಲ್ಲಿಸಬೇಕು; ಇತರೆ ಅಭ್ಯರ್ಥಿಗಳು ಅರ್ಜಿ ಶುಲ್ಕ ರೂ.450/- ಮತ್ತು ಸೇವಾ ಶುಲ್ಕ ರೂ. 50/- ಪಾವತಿಸಬೇಕು.<br>(ಬಿ) ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಸಂದರ್ಭಗಳಲ್ಲಿ ಮರು ಪಾವತಿಸಲಾಗುವುದಿಲ್ಲ ಅಥವಾ ಮರು- ಹೊಂದಾಣಿಕೆ ಮಾಡಲಾಗುವುದಿಲ್ಲ. |
| **4.** | **ಅರ್ಜಿ ಸಲ್ಲಿಸಿದ ನಂತರ ಪಾಲಿಸಬೇಕಾದ ಸೂಚನೆ** |
| | (ಎ) ಅಭ್ಯರ್ಥಿಗಳು ಒಮ್ಮೆ ಅರ್ಜಿ ಸಲ್ಲಿಸಿದ ನಂತರ ನೇಮಕಾತಿಯ ಸ್ಥಿತಿ ನವೀಕರಣಗಳ ಕುರಿತಂತೆ ನಿಯಮಿತವಾಗಿ ಸಂಸ್ಥೆಯ ಜಾಲತಾಣ ಮತ್ತು ಪೋರ್ಟಲ್‌ಗಳನ್ನು ಪರಿಶೀಲಿಸುತ್ತಿರಬೇಕು.<br>(ಬಿ) ಆಸಕ್ತ ವ್ಯಕ್ತಿಗಳು ಅಧಿಸೂಚನೆ ಮತ್ತು ಇತರ ವಿವರಗಳಿಗಾಗಿ ಸಂಸ್ಥೆಯ ಜಾಲತಾಣ: https://iisc.ac.in/careers/regular-positions/ ಗೆ ಭೇಟಿ ನೀಡಲು ವಿನಂತಿಸಲಾಗಿದೆ<br>(ಸಿ) ಉದ್ಯೋಗ-ಆಧಾರಿತ ಸಾಮರ್ಥ್ಯ ಪರೀಕ್ಷೆಗೆ ಸಂಬಂಧಿಸಿದ ಮಾಹಿತಿಯನ್ನು ಸಂಸ್ಥೆಯ ಜಾಲತಾಣ ಮತ್ತು ಇ-ಮೇಲ್ ಮೂಲಕ ತಿಳಿಸಲಾಗುತ್ತದೆ. ಅಭ್ಯರ್ಥಿಯು ಸಕಾಲದಲ್ಲಿ ಜಾಲತಾಣ ಪರಿಶೀಲಿಸಲು/ ಪ್ರವೇಶಿಸಲು ವಿಫಲವಾದಲ್ಲಿ ಸಂಸ್ಥೆಯು ಯಾವುದೇ ರೀತಿಯಲ್ಲಿ ಜವಾಬ್ದಾರನಾಗಿರುವುದಿಲ್ಲ. ಅಭ್ಯರ್ಥಿಗಳು ಸಂಸ್ಥೆಯ ವೆಬ್‌ಸೈಟ್‌ಗೆ ನಿಯಮಿತವಾಗಿ ಭೇಟಿ ನೀಡುವಂತೆ ವಿನಂತಿಸಲಾಗಿದೆ.<br>(ಡಿ) ಪರೀಕ್ಷೆಯ ನಡಾವಳಿ ಮತ್ತು ಫಲಿತಾಂಶದ ಬಗ್ಗೆ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸಂಸ್ಥೆಯು ತನ್ನ ಜಾಲತಾಣ/ ಹೋಮ್ ಪೇಜ್ ನಲ್ಲಿ ಮಾಹಿತಿಯನ್ನು ಅಪ್‌ಲೋಡ್ ಮಾಡುತ್ತದೆ. ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಆನ್‌ಲೈನ್ ಅಪ್ಲಿಕೇಶನ್ ಪೋರ್ಟಲ್ ನಲ್ಲಿ ಸ್ವಯಂ ಆಸಕ್ತಿಯಿಂದ ಸಲ್ಲಿಸಬಹುದು.<br>https://cdn.digialm.com:443//EForms/configuredHtml/956/80596/Registration.html |

| | |
|---|---|
| | https://cdn.digialm.com:443//EForms/configuredHtml/956/80596/login.html<br>(ಇ) ಪರೀಕ್ಷಾ ನಡಾವಳಿ ಮತ್ತು ಫಲಿತಾಂಶದ ಬಗ್ಗೆ ಅಭ್ಯರ್ಥಿಗಳಿಂದ ಯಾವುದೇ ಪತ್ರವ್ಯವಹಾರಕ್ಕೆ ಅವಕಾಶವಿಲ್ಲ.<br>(ಎಫ್) ಆಯ್ಕೆಯಾದ/ ಶಾರ್ಟ್‌ಲಿಸ್ಟ್ ಮಾಡಿದ ಅಭ್ಯರ್ಥಿಗಳಿಗೆ ಇಮೇಲ್ ಮೂಲಕ ಮಾತ್ರ ಮಾಹಿತಿ ನೀಡಲಾಗುವುದು ಮತ್ತು ಯಾವುದೇ ಪ್ರತ್ಯೇಕ ಸಂವಹನವನ್ನು ಕಳುಹಿಸಲಾಗುವುದಿಲ್ಲ. |

**ದಿನಾಂಕ : 17.12.2022**

ಕುಲಸಚಿವರು